ಹಳ್ಳಿಯ ಮನೆಗಳು ಚಿಕ್ಕದಾಗಿ ಕಂಡವು. ಹಾಳಿಯ ಬದದ ಮೇಲೆ ನಾಜೂಕಾಗಿ ನಡೆಸಿ ಮಾವಿನಮರದ ಪಕ್ಕ ನಿಲ್ಲಿಸಿದ. ಕಾಳು ಗಟ್ಟಿಗೊಳ್ಳುತ್ತಿದ್ದ ತೆನೆಗಳ ಭಾರಕ್ಕೆ ತಲೆಬಾಗಿಸಿ ಗಾಳಿಯಾಡಿಸಿದತ್ತ ತುಯ್ಯುತ್ತಿದ್ದ ಬಿಮ್ಮನಸಿಯಂತಹ ಭತ್ತ, ಹಸಿರು ಹಳದಿ ಸಮುದ್ರದಲ್ಲಿ ಅಲೆಗಳೇಳುತ್ತಿರುವ ಭಾಸ ಮೂಡಿಸುತ್ತಿತ್ತು ಕಿಲೋಮೀಟರುಗಳಷ್ಟ್ವರಬಹುದಾದ ಅನ್ನಪೂರ್ಣೆಯ ಸಾಮ್ರಾಜ್ಯ.

‘ಇದೆಲ್ಲ ನಿಮ್ಮದೇನಾ?’ ಕೇಳಿದಳು ಬೆರಗಿಂದ.

‘ಈ ಸಾವಿರಾರು ಎಕರೇನಾ?’ ಕಣ್ಣರಳಿಸಿ ನಕ್ಕವ ‘ಹಳ್ಳಿಯವರ ಜಮೀನಿದೆ, ಸಂಗಡ ನಮ್ಮದೂ ಅಷ್ಟು’ ಅಂದ.

ಚಿಕ್ಕ ಚಿಕ್ಕ ಹಾಳಿಗಳಾಗಿ ವಿಂಗಡಿಸಿ ಬದು ಕಟ್ಟಿ ಭತ್ತದ ಬುಡದಲ್ಲಿ ನೀರು ನಿಲ್ಲಿಸಿದ್ದರು. ನೀರಲ್ಲಿ ವಿವಿಧ ಗಾತ್ರದ ಏಡಿಗಳು ಆಗಾಗ ಕಾಣಿಸಿ ಮರೆಯಾಗುತ್ತಿದ್ದವು. ಏಡಿಯ ಬೇಟೆಗೆ ಒಂಟಿಕಾಲಲ್ಲಿ ಕುಳಿತ ಬೆಳ್ಳಕ್ಕಿ. ಒಂದು ಕಡೆಯಿಂದೆದ್ದು ಇನ್ನೊಂದು ಕಡೆಗೆ ಭರ್ರೆಂದು ಹಾರುವ ಹಕ್ಕಿಗಳ ಹಿಂಡು.

‘ಏನಿವತ್ತು ಶೂಟಿಂಗಿಲ್ಲವಾ?’ ಕೇಳಿದ.

‘ಬೇಗ ಮುಗೀತು, ತಿರುಗಾಡಬೇಕೆನಿಸ್ತು.’

‘ನೀವೀಗ ಪರದೆ ಮೇಲೆ ಕಾಣಿಸಿಕೊಳ್ಳೋ ನಟಿ. ನಿಮ್ಮನ್ನ ಕಂಡರೆ ಜನ ಇರುವೆ ಹಾಗೆ ಸುತ್ತುವರಿದು ಮುಜುಗರ ಮಾಡಿಬಿಡತಾರೆ. ಹುಶಾರು!’

‘ಅಂತಾ ದೊಡ್ಡ ನಟಿಯೇನಲ್ಲ ನಾನು’.

‘ಹೌದು, ನೀವು ಎಮ್ಮೆಸ್ಸಿ ಮಾಡಿದೀರಂತೆ. ಒಳ್ಳೇ ಸಂಬಳದ ಉದ್ಯೋಗ ಸಿಗುತಿತ್ತು ನಿಮಗೆ...’

‘ಯಾಕ್ರೀ... ನಾನು ಓಡಿಹೋಗಲಿ ಅನಿಸ್ತಿದೆ ನಿಮಗೆ? ನಾನು ಓದಿದ್ದೇ ಕೃಷಿ. ಅವಕಾಶ ಮನೆಯಲ್ಲೆ ಇದ್ದಾಗ ಎಲ್ಲೆಲ್ಲೋ ಯಾಕೆ ಹೋಗೋದು? ಅಲ್ದೆ ಮನೆಯಲ್ಲೂ ಯುವಕರು ಅಂತ ಮತ್ತ್ಯಾರಿದ್ದಾರೆ ನೀವೆ ನೋಡಿದೀರಲ್ಲ.’

‘ಹಾಗಲ್ಲ, ಕಲಿತ ಮೇಲೆ ಯಾರನ್ನು ಕೇಳಿದ್ರೂ ನೌಕರೀಲಿದೇನೆ ಅಂತಾರೆ. ಅದಕ್ಕೇ...’

‘ಹೌದು. ಇವತ್ತಿನ ಶಿಕ್ಷಣದಲ್ಲಿ ಜಾಸ್ತಿ ಕಲಿತ ಹಾಗೆ ಪರಿಣತಿ ಪಡೆಯೋ ಕ್ಷೇತ್ರದ ಆಳ ಜಾಸ್ತಿಯಾಗತಾ, ವ್ಯಾಪ್ತಿ ಚಿಕ್ಕದಾಗತಾ ಹೋಗತದೆ. ನಾನು ಕಲಿತದ್ದು ಮೈಕ್ರೋ ಬಯಾಲಜಿ ಅಂದ್ರೆ ಸೂಕ್ಷ್ಮಾಣು ಜೀವಿಗಳು. ಅದೇ ತರ ನನ್ನ ಸಂಗಡಿಗರು ಹಣ್ಣು ಸಂಸ್ಕರಣೆ, ಶೈತ್ಯೀಕರಣ ಅಂತೆಲ್ಲ ಪರಿಣತರಾದರು. ಆದರಿಲ್ಲಿ ಭೂಮಿಯಲ್ಲಿ ನಿಂತರೆ, ಒಂದೇ ವಿಷಯದ ಪರಿಣತಿ ಉಪಯೋಗಕ್ಕೆ ಬರೋದಿಲ್ಲ. ಇಲ್ಲಿ ಎಲ್ಲವೂ ಮುಖ್ಯ. ಹೀಗಾಗಿ ಅವರೆಲ್ಲ ಕೊನೆಗೆ ಹೋಗಿ ತಲುಪೋದು ದೊಡ್ಡದೊಡ್ಡ ಕಂಪನಿಗಳನ್ನೆ.’

ಕ್ಷಣ ಮೌನವಾದವ ಏನೋ ಅನ್ನಿಸಿ ಕೇಳಿದ. ‘ಹೌದು ನೀವು ಪುಸ್ತಕ ಓದುತೀರ ಅನಿಸ್ತಿದೆ?’

‘ಹೌದು, ನಾನು ಸಮಾಜಶಾಸ್ತ್ರದಲ್ಲಿ ಪದವಿ ಮಾಡಿದೀನಿ. ಓದೋ ಹವ್ಯಾಸ ಮೊದಲಿಂದ್ಲು ಅಂಟಿಕೊಂಡಿದ್ದು...’

‘ಮತ್ತೆ ಈ ಅಭಿನಯ ಕ್ಷೇತ್ರವನ್ನು ನೀವೇ ಆಯ್ದುಕೊಂಡದ್ದಾ? ತಪ್ಪಲ್ಲ. ಅದರಲ್ಲಿ ಹಣ, ಪ್ರಸಿದ್ಧಿ ಎರಡೂ ಇದೆ. ಅವಕಾಶ ಸಿಕ್ರೆ ಸಾಕು ಅಂತ ಯುವಜನ ಕಾತರಿಸೋದು ನಂಗೊತ್ತು.’

‘ನಾನು ನೌಕರಿಗೂ ಪ್ರಯತ್ನಿಸಿದ್ದೆ. ಅಂದರೆ... ಅದು ಹಾಗಲ್ಲ, ಬಿಡಿ...’ ಅವಳಿಗೆ ಮತ್ತೂ ಏನೋ ಹೇಳಲಿಕ್ಕಿದೆ ಅನಿಸಿತು ಆನಂದನಿಗೆ. ಆದರೆ ಆಗಲೆ ಕತ್ತಲಾಗತೊಡಗಿದ್ದು ಗಮನಕ್ಕೆ ಬಂತು. ‘ನೋಡಿ, ಸೂರ್ಯ ಮುಳುಗಿಯಾಯ್ತು. ನಾವು ಗೂಡಿನತ್ತ ಹಾರಬೇಕೀಗ. ಕಾಲುದಾರಿ ನಡಿಗೆ ಕಷ್ಟ’ ಅಂದ. ಅವನ ಮಾತಿಗೆ ಸಶಬ್ದವಾಗಿ ನಗದಿರಲಾಗಲಿಲ್ಲ.

ಮಬ್ಬು ಬೆಳಕಿನಲ್ಲಿ ನಡಿಗೆ ನಿಧಾನವಾಗುತ್ತಿತ್ತು. ಅವಳು ಮುಂದೆ, ಆನಂದ ಹಿಂದೆ ಇದ್ದರು.

‘ಕತ್ತಿಯನ್ನು ಧೈರ್ಯಕ್ಕೆ ತಂದಿದೀರ?’ ಕೇಳಿದಳು.

‘ಇಲ್ಲಿ ಯಾವ ವೈರಿ ಬರತಾನ್ರೀ?’ ಎಂದು ನಕ್ಕವ, ‘ಇಲ್ಲ. ಗದ್ದೆ ಅಥವಾ ತೋಟಕ್ಕೆ ಹೋಗುವಾಗ ಕೃಷಿಕರ ಹತ್ತಿರ ಕತ್ತಿ, ಗುದ್ಲಿ ಏನೋ ಒಂದು ಸಲಕರಣೆ ಇದ್ದೇ ಇರಬೇಕು. ಕೆಲಸವಿದ್ದೇ ಇರತದೆ.’

‘ನಿಮ್ಮನೇಲಿ ಹಿರಿಯರ ಖಡ್ಗ, ಈಟಿ ಎಲ್ಲಾ ಇದೆಯ?’ ಕಲ್ಲೊಂದು ಎಡವಿ ವಾಲುವಂತಾಯಿತು. ಹಿಂದಿಂದ ಬಲಗೈ ಆಸರೆ ಕೊಟ್ಟು ತಡೆಯುತ್ತ ‘ಎಲ್ಲಾ ಶಸ್ತ್ರಾಸ್ತ್ರಗಳಿಲ್ಲ. ನಮ್ಮವರೇನು ಸೇನಾಪತಿಗಳಾಗಿರಲಿಲ್ಲ. ಆದರೆ ಆ ಕಾಲದಲ್ಲಿ ಶಸ್ತ್ರವಿದ್ಯೆ ಅನಿವಾರ್ಯವಾಗಿತ್ತು. ಖಡ್ಗವಿದೆ. ಕುದುರೆಯ ಜೀನು ರಿಕಾಬು ಎಲ್ಲ’ ಅಂದ. ಮನೆ ತಲುಪುವಾಗ ಕತ್ತಲಾಗಿತ್ತು.

***

ಆನಂದ ಕಾಲು ಮುಖ ತೊಳೆದು ದೇವರಿಗೆ ನಮಸ್ಕಾರ ಮಾಡಿ ಲೆಕ್ಕ ಬರೆಯಲು ಕುಳಿತ. ಆಮೇಲೆದ್ದು ಅಜ್ಜ ಕುಳಿತಲ್ಲಿಗೆ ಹೋದ. ತೋಟದಲ್ಲಿ ತಂಪುಳಿಸಲು ಹನಿ ನೀರಾವರಿಯ ಬಗ್ಗೆ ಅವನು ಮಾಡಿದ ಪ್ರಸ್ತಾಪ ದೇಶ್ವಂತರಿಗೆ ನೆನಪಿತ್ತು. ಭತ್ತದ ಫಸಲಿನ ಬಗ್ಗೆ, ದೀಪಾವಳಿಯಾಗಿ ಎರಡು ವಾರಕ್ಕೆ ನದಿಯಾಚೆಯ ಗದ್ದೆಯಲ್ಲಿ ಭತ್ತ ಕಟಾವು ಮಾಡಬಹುದಾದ್ದರ ಬಗ್ಗೆ ಚರ್ಚಿಸಿದ.

ಚಂದನಿಕಾಳಿಗೆ ಇವತ್ತಿನ ತಿರುಗಾಟ ಒಂದು ಅಪೂರ್ವ ಲವಲವಿಕೆಯನ್ನುಂಟುಮಾಡಿತ್ತು.

ಊಟ ಮುಗಿಸಿ ಸ್ವಲ್ಪ ಹೊತ್ತಿಗೆ ‘ಅಮ್ಮಾ ಸ್ವಲ್ಪಹೊತ್ತು ಟೀವಿ ನೋಡೋಣವೇ?’ ಕೇಳಿದಳು.

5

## ಜನಪ್ರಿಯತೆಯ ಹಾದಿಯಲ್ಲಿ...

ಧಾರಾವಾಹಿ ಟೀವಿಯಲ್ಲಿ ಜನಪ್ರಿಯತೆ ಏರಿಸಿಕೊಳ್ಳತೊಡಗಿತು. ಅದೂ ಈ ಭವನದ ದೃಶ್ಯ ಬರತೊಡಗಿದ ಮೇಲೆ ಆಕರ್ಷಣೆ ಹೆಚ್ಚಿತು. ಊರವರಿಗೆ ಅಲ್ಲಿ ಚಿತ್ರೀಕರಣ ನಡೆಯುವುದು ಗೊತ್ತಾಗಿ, ಗೇಟಿನ ಹತ್ತಿರ ನಿಂತು ಏನಾದರೂ ಕಾಣಿಸಬಹುದು ಅಂತ ಇಣುಕಿ ನೋಡುವ ಜನ ಹೆಚ್ಚಾದರು. ಒಳಗೆ ಯಾರನ್ನೂ ಬಿಡುತ್ತಿರಲಿಲ್ಲ. ಅವತ್ತು ನದಿಯಲ್ಲಿ ಪ್ರವಾಹ ಬಂದು ನಾಯಕಿ ಅಡಗಿರುವ ಮನೆಗೆ ನೀರು ನುಗ್ಗುವ ಸನ್ನಿವೇಶವಿತ್ತು. ಈ ಸಮಯದಲ್ಲಿ ಅದನ್ನು ಹೇಗೆ ಮಾಡಬಹುದೆಂಬ ಕುತೂಹಲದ ಸಂಗಡ ಈ ಮಣ್ಣಿನಗೋಡೆ ಮನೆಯಲ್ಲಿ ಯದ್ವಾತದ್ವಾ ನೀರು ತುಂಬಿಸಿದರೆ ಕಟ್ಟಡಕ್ಕೆ ಸರಿಪಡಿಸಲಾಗದ ಹಾನಿ ನಿಶ್ಚಿತ ಎಂದು ಆತಂಕಿತರಾದರು ಮನೆಯವರು. ತಾನಿದ್ದೇನೆ, ನೆಲ ಸಹ ಒದ್ದೆಯಾಗೋದಿಲ್ಲ ಅಂತ ನಾಯ್ಡು ಆಶ್ವಾಸನೆ ಕೊಟ್ಟರೂ ಆತಂಕವಿದ್ದೇ ಇತ್ತು. ತಯಾರಿ ಶುರುವಾಯ್ತು. ಸಹಾಯಕರು ಕೋಣೆಯೊಳಗೆ ಕಂದುಬಣ್ಣದ ದಪ್ಪನೆಯ ಅಗಲವಾದ ಪ್ಲಾಸ್ಟಿಕ್ ಶೀಟನ್ನು ನೆಲವೆಲ್ಲ ಆವರಿಸುವಂತೆ ಹಾಸಿ, ಗೋಡೆಗೆ ಎರಡಡಿ ಎತ್ತರಕ್ಕೆ ಬರುವಂತೆ ಅಳವಡಿಸಿದರು. ಬಾಗಿಲಿರುವಲ್ಲಿ ಶೀಟಿನ ಹಿಂದೆ ಪ್ಲೈವುಡ್ ಆಧಾರ ಕೊಟ್ಟು ತಯಾರಾದ ಮೇಲೆ, ಚಂದನಿಕಾ ಇರುವ ಮೂಲೆಯ ಕಡೆ ಟ್ಯಾಂಕರುಗಳಲ್ಲಿ ತಂದ ಕರಡು ನೀರನ್ನು ಹರಿಸಲಾಯಿತು. ಅವಳ ಹಿಂದೆ ಕ್ಯಾಮರಾ ಚಿತ್ರೀಕರಿಸಿಕೊಳ್ಳುತ್ತಿತ್ತು. ಅವಳು ಜೀವಭಯದಿಂದ ತಪ್ಪಿಸಿಕೊಳ್ಳಲು ಹೆಣಗಾಡುತ್ತಿರುವಂತೆ ಅವಳ ಮೊಳಕಾಲು ದಾಟಿ ನೀರೇರಿತು. ತೆಂಗು ಮತ್ತು ಕುಂಬಳಕಾಯಿಗಳು, ವಸ್ತ್ರ, ಬಿದಿರಿನ ಬುಟ್ಟಿಗಳು ನೀರಮೇಲೆ ತೇಲತೊಡಗಿದವು. ಅವಳು ತೊಪ್ಪನೆ ಜಾರಿಬಿದ್ದು ನೀರಲ್ಲಿ ಅಂಗೈ ಊರಿ ತೇಲಿಹೋಗುತ್ತಿರುವಂತೆ ತೋರಿಸಿದಳು. ಮುಗಿಯಿತು. ಪಂಪ್‌ಸೆಟ್ಟಿಂದ ನೀರನ್ನು ಮರಗಳತ್ತ ಹರಿಸಿ ಆಮೇಲೆ ಪ್ಲಾಸ್ಟಿಕ್ ಶೀಟುಗಳನ್ನು ತೆಗೆದರು. ನೆಲಕ್ಕೇನೂ ಆಗಿರಲಿಲ್ಲ!

‘ಮತ್ತೇ ಮಳೆ, ಪ್ರವಾಹ ಇದನ್ನೆಲ್ಲ ಹೇಗೆ ತೋರಿಸ್ತೀರಿ?’ ಕೇಳಿದರು ಬಕುಲಾ. ‘ಉಕ್ಕಿ ಹರಿಯೋ ನದಿ ಮತ್ತೆ ಭೋರ್ಗರೆಯೋ ಮಳೆಯನ್ನ ಮಳೆಗಾಲದಲ್ಲಿ ಬೇರೆ ಕಡೆ ಶೂಟ್ ಮಾಡಿಯಾಗಿದೆ. ಅದನ್ನ ಈ ದೃಶ್ಯಕ್ಕೆ ಜೋಡಿಸಿಕೊಳ್ತೀವಿ’ ಅಂದ ಕ್ಯಾಮರಾಮನ್. ಕೋಣೆ ಮೊದಲಿದ್ದಹಾಗೇ ಆಯಿತು.

ಮಧ್ಯಾಹ್ನದ ನಂತರ ಶೂಟಿಂಗಿರಲಿಲ್ಲ. ಅಂಗಳದಲ್ಲಿ ಹೂಗಿಡಗಳ ನಡುವೆ ಬಕುಲಾ ಏನೋ ಮಾಡುತ್ತಿದ್ದರು. ಅವರ ಸಂಗಡ ಮಾತಾಡುತ್ತ ಕಮಲಮ್ಮ ಚಂದನಿಕಾ ನಿಂತಿದ್ದರು. ಚಹ ಮುಗಿಸಿದ ಆನಂದ ಹೊರ ಹೊರಟದ್ದು ಕಂಡು ಗದ್ದೆಗೆ ಅಂತ ಅರ್ಥ ಮಾಡಿಕೊಂಡ ಚಂದನಿಕಾಳಿಗೆ ಆಸೆಯಾಯಿತು. ‘ಅಮ್ಮ ನಾನೂ ಅವರ ಸಂಗಡ ಹೋಗಿ ಬರಬಹುದಾ?’ ಅಂತ ಕೇಳಿದಳು ಬಕುಲಾರ ಹತ್ತಿರ. ತಟ್ಟನೆ ಉತ್ತರಿಸಲಾಗದೆ ಅವರು ಮಗನ ಮುಖ ನೋಡಿದವರು, ‘ಬರಲೇನೋ ಆನಂದ?...’ ಕೇಳಿದರು. ‘ಸರಿನಮ್ಮ’ ಅಂದ. ಇಬ್ಬರೂ ಕಾಲುದಾರಿಯಲ್ಲಿ ಮರೆಯಾದಮೇಲೆ ಮತ್ತೆ ಮಾತುಕತೆ ಶುರುಮಾಡಿದರು ಕಮಲಮ್ಮ. ‘ನಾನು ಬರೋದ್ರಿಂದ ನಿಮಗೆ ತೊಂದರೆಯಾಗುತ್ತಾ?’ ಹಿಂಬಾಲಿಸುತ್ತಾ ಕೇಳಿದಳು ಚಂದನಿಕಾ.

‘ಯಾಕೆ ಹಾಗೆ ಕೇಳುತೀರಿ? ಅದಕ್ಕೇ ನನ್ನಜ್ಜಿಯ ಒಪ್ಪಿಗೆ ಪಡೆದದ್ದಾ?’ ನಕ್ಕ.

‘ಅವರೆಲ್ಲಾ ಇದ್ದರಲ್ವಾ... ಹಾಗೇ ಹಿಂಬಾಲಿಸೋದು ಸರಿಯೆನಿಸ್ಲಿಲ್ಲ. ನಂಗೆ ಕಲಕಲಗುಟ್ಟುವ ನೀರು, ಬೆಳೆ ತುಂಬಿಕೊಂಡ ನೆಲ, ಮಳೆಗಾಲದ ಮೋಡ ಎಲ್ಲಾ ಖುಷಿ. ಫಲವತ್ತತೆಯ ಸಂಕೇತವಾಗಿದ್ದಕ್ಕೆ.’

‘ಯಾವುದೋ ರೈತನನ್ನು ಮದುವೆಯಾದರೆ